ವಿಳಂಬವಾಗಿದೆ. 1995ರವರೆಗೆ ಅದರ ಬಗ್ಗೆ ಯಾವುದೇ ಕಾರ್ಯಕ್ರಮವನ್ನೂ ಜಾರಿ ಮಾಡಿರಲಿಲ್ಲ. ಈಗಾಗಲೇ ಅದನ್ನು 3 ಕೋಟಿ 42 ಲಕ್ಷ ರೂಪಾಯಿಗಳ ಅಂದಾಜು ವೆಚ್ಚದ ಗುತ್ತಿಗೆಯನ್ನು ಕೆ.ವಿ.ಎಸ್. ಶೇಷಗಿರಿರಾವ್ ಎನ್ನುವವರಿಗೆ ಒಪ್ಪಿಸಿದ್ದು, ಇದನ್ನು ಮಂಜೂರಾತಿಗೆ ಆರ್ಥಿಕ ಇಲಾಖೆಗೆ ಕಳುಹಿಸಿ ಕೊಡಲಾಗಿದೆ. ಇದು ಮಂಜೂರಾದರೆ 2 ವರ್ಷ ಆಗುತ್ತದೆ ಎನ್ನುವುದನ್ನು ನಾವು ಹೇಳಿದ್ದೇವೆಯೇ ಹೊರತು ಇದು ಮಂಜೂರಾತಿ ಆಗುವುದಕ್ಕೇ ಎಷ್ಟು ವರ್ಷ ಆಗುತ್ತದೆ ಎಂದು ಕೇಳುತ್ತೇನೆ ಎನ್ನುವ ಮಾತು ಸರಿಯಲ್ಲ. ಅದು ತೀವ್ರವಾಗಿ ಮಂಜೂರಾಗುತ್ತದೆ. ಬೇಗ ಆ ಕೆಲಸವನ್ನು ಮುಗಿಸಲು ಪ್ರಯತ್ನ ಮಾಡುತ್ತೇವೆ ಎಂದು ಹೇಳಲು ಇಚ್ಛಿಪಡುತ್ತೇನೆ.

ಶ್ರೀ ಎಸ್. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೇ, ಅವರು ವೇಗ್ ಆಗಿ ಒಪ್ಪಿಗೆಯಾದ ಮೇಲೆ ಎಂದು ಉತ್ತರ ಕೊಟ್ಟಿದ್ದಾರೆ. ತಾವು ಖಂಡಿತವಾಗಿ ಯಾವಾಗ ಒಪ್ಪಿಗೆ ಕೊಡುತ್ತೀರಿ, ಫೈನಾನ್ಸ್ ಡಿಪಾರ್ಟ್‌ಮೆಂಟಿನಿಂದ ಯಾವಾಗ ತರಿಸುತ್ತೀರಿ, ಕೆಲಸ ಪ್ರಾರಂಭ ಮಾಡುವುದಕ್ಕೆ ಗುತ್ತಿಗೆದಾರರಿಗೆ ಯಾವಾಗ ನಿಖರವಾದಂಥ ಆಜ್ಞೆಯನ್ನು ಕೊಡುತ್ತೀರಿ, ಎನ್ನುವುದನ್ನು ಹೇಳಿದರೆ ಸಾಕು.

ಶ್ರೀ ಸಿ.ಎಂ. ಉದಾಸಿ : ಆರ್ಥಿಕ ಇಲಾಖೆಯಿಂದ ತೀವ್ರವಾಗಿ ಮಂಜೂರಾತಿಯನ್ನು ಪಡೆದು ಅತೀ ಬೇಗ ಮುಗಿಸುವ ವ್ಯವಸ್ಥೆ ಮಾಡಿಸುತ್ತೇವೆ.

ಶ್ರೀ ಎಸ್. ಕೃಷ್ಣಪ್ಪ : ನನ್ನ ಪ್ರಶ್ನೆ ಇಷ್ಟೇ. ತೀವ್ರ, ತೀವ್ರ ಎಂದು ಹೇಳುತ್ತಿದ್ದಾರೆ, ಆರ್ಥಿಕ ಇಲಾಖೆಗೆ ಹೋಗಿ ಈಗಾಗಲೇ ನಾಲ್ಕು ತಿಂಗಳಾಗಿದೆ. ಇಲ್ಲಿಂದ ಇಲ್ಲಿಗೆ ಬರಬೇಕಾದರೇ ನಾಲ್ಕು ತಿಂಗಳು ಆದರೆ, ಕೊಡುವುದು ಯಾವಾಗ? This is on going project..

ಅಧ್ಯಕ್ಷರು : ಮೂರು ತಿಂಗಳು ಆಗಬಹುದೇ?

ಶ್ರೀ ಸಿ.ಎಂ. ಉದಾಸಿ : ಮೂರು ತಿಂಗಳೊಳಗಾಗಿ ಮಾಡಿಸುತ್ತೇವೆ.

ಅಧ್ಯಕ್ಷರು : ಮೂರು ತಿಂಗಳೊಳಗಾಗಿ ಮಾಡಿಸುತ್ತಾರೆ.

ಪ.ಜಾ/ಪ.ಪಂ.ಗಳಿಗೆ ವಾದ್ಯಪರಿಕರಗಳ ಹಂಚಿಕೆ

1614 - ಶ್ರೀಮತಿ ಬಿ.ಟಿ. ಲಲಿತಾ ನಾಯಕ್ (ದೇವದುರ್ಗ) : ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡಗಳಿಗೆ ವಾದ್ಯಪರಿಕರಗಳನ್ನು ಕೊಡುವ ಕಾರ್ಯಕ್ರಮವಿದೆಯೇ?*

ಆ) *ಇದರಡಿಯಲ್ಲಿ 1995-96ನೇ ಸಾಲಿನಲ್ಲಿ ಯಾವ ಯಾವ ಜಿಲ್ಲೆಗಳಿಗೆ ಎಷ್ಟೆಷ್ಟು ವಾದ್ಯಪರಿಕರಗಳನ್ನು ಕೊಡಲಾಗಿದೆ.*

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) :

ಅ) ಇದೆ

ಆ) ವಿವರಗಳನ್ನು ಅನುಬಂಧದಲ್ಲಿ ಕೊಡಿಲಾಗಿದೆ.

ಅನುಬಂಧ

ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡದವರಿಗೆ ವಿತರಿಸಲಾಗಿರುವ ವಾದ್ಯ ಪರಿಕರಗಳು :

ಶಿವಮೊಗ್ಗ

	ಪರಿಶಿಷ್ಟ ಜಾತಿ		ಪರಿಶಿಷ್ಟ ಪಂಗಡ
1.	ಬ್ಯಾಂಡ್ ಸೆಟ್-5	1.	ಡೊಳ್ಳುಸೆಟ್-1
2.	ಡೊಳ್ಳುಸೆಟ್-2	2.	ನೃತ್ಯ ಸೆಟ್-1
3.	ಭಜನೆ ಸೆಟ್-4	3.	ಭಜನೆ ಸೆಟ್-2
4.	ಲಂಬಾಣಿ ಉಡುಪು-1		
5.	ಹಲಗೆ ಮೇಳ-1		
6.	ಕಿನ್ನರಮೇಳ ಸೆಟ್-1		
7.	ಕೋಲಾಟ ಸೆಟ್-1		

ಚಿತ್ರದುರ್ಗ

1.	ಭಜನೆ ಸೆಟ್-7	1.	ಭಜನೆ ಸೆಟ್-2
2.	ನಗಾರಿ ಭಜನೆ ಸೆಟ್-2	2.	ಭೂತನ ಮುಖವಾಡಗಳು ಸೆಟ್-1
3.	ಬ್ಯಾಂಡ್‌ವಾದ್ಯ ಸೆಟ್-1		
4.	ಸುಗಮ ಸಂಗೀತ ಸೆಟ್-1		
5.	ತಮಟೆಗಳು-10		
6.	ಕೀಲು ಕುದುರೆ-2		
7.	ಸೋಮನ ಮುಖವಾಡಗಳು ಸೆಟ್-1 ಮತ್ತು ಸಮವಸ್ತ್ರ		

ಬೆಳಗಾವಿ

1.	ಭಜನೆ ಸೆಟ್-8	1.	ಭಜನೆ ಸೆಟ್-3
2.	ಸಣ್ಣ ಆಟ ಪರಿಕರಗಳು-3		
3.	ಜುಂಜುಂ ಸೆಟ್-1		
4.	ಕರಡಿಮೇಳ ಸೆಟ್-1		
5.	ಜನಪದ ಹಾಡುಗಳ ಸೆಟ್-1		

ಚಿಕ್ಕಮಗಳೂರು

1.	ಬ್ಯಾಂಡ್ ಸೆಟ್-14	1.	ಹಾರ್ಮೋನಿಯಂ ಸೆಟ್-3

ರಾಯಚೂರು

1. ಭಜನೆ ಸೆಟ್-15
2. ಸುಗಮ ಸಂಗೀತ ಸೆಟ್-2
3. ಶಾಸ್ತ್ರೀಯ ಹಾರ್ಮೋನಿಯಂ-1
4. ಕಣಿ ಹಲಗೆ-1
5. ಡೊಳ್ಳುಸೆಟ್-1
6. ಹಗಲುವೇಷ-1

1. ಭಜನೆ ಸೆಟ್-2
2. ಡೊಳ್ಳುಪರಿಕರಗಳ ಸೆಟ್-1
3. ಸುಗಮ-ಶಾಸ್ತ್ರೀಯ ಸೆಟ್-1

ಬಿಜಾಪುರ

1. ಭಜನೆ ಸೆಟ್-9
2. ಲಂಬಾಣಿ ಭಜನೆ ಸೆಟ್-1
3. ಲಂಬಾಣಿ ನೃತ್ಯ ಸೆಟ್-1
4. ಭಕ್ತಿ ಗೀತೆ ಸೆಟ್-1
5. ಜಾನಪದ ಹಾಡು ಸೆಟ್-1
6. ಬ್ರಾಸ್‌ಬ್ಯಾಂಡ್ ಸೆಟ್-1
7. ಹಲಗೆ ಮಜಲು ಸೆಟ್-2
8. ಶಹಾನಾಯ್ ವಾದನ ಸೆಟ್-1
9. ತಾಶವಾದನ ಸೆಟ್-1

1. ಭಜನೆ ಸೆಟ್-3

ಕಾರವಾರ

1. ಹಾರ್ಮೋನಿಯಂ-8
2. ತಬಲ ಸೆಟ್-5
3. ಮೃದಂಗ-2
4. ಡೋಲಕ್-1
5. ಚಿಕ್ಕಡೋಲು-1
6. ಶಹಾನಾಯಕ್-3
7. ಡೋಲು-2
8. ಬ್ಯಾಂಡ್‌ಸೆಟ್-1
9. ತಾಶವಾದನ ಸೆಟ್-1
10. ಸಾಬಾಲ-1
11. ತಂಜೂರಿ-4 ಜೊತೆ

1. ಹಾರ್ಮೋನಿಯಂ -3
2. ತಬಲ ಸೆಟ್-3
3. ಮೃದಂಗ-1
4. ಗಂಜೂರು-50
5. ತಾಳ - ಅರ್ಧ ಕೆ.ಜಿ.

12. ದಮಡಿ-1
13. ತಾಳ-9

ಮಂಡ್ಯ

1. ಬ್ಯಾಂಡ್‌ಸೆಟ್-5
2. ಭಜನೆ ಸೆಟ್-6
3. ಡೊಳ್ಳುಸೆಟ್-2
4. ನಗಾರಿ ಸೆಟ್-1
5. ತಬಲ ಸೆಟ್-1

1. ಚೀನಿ ಸೆಟ್-2

ಮಡಿಕೇರಿ

1. ಯಕ್ಷಗಾನ ಸೆಟ್-1
2. ಜಾನಪದ ಸೆಟ್-2
3. ಬ್ಯಾಂಡ್‌ಸೆಟ್-8

ಬೆಂಗಳೂರು ನಗರ

1. ತಮಟೆ-27
2. ತಾಸು-5
3. ರಂಡೋಲು-8
4. ನಾಗಸ್ವರ-3
5. ಡೋಲು-4
6. ಹರೆ-2
7. ವಯಲೀನ್-1
8. ಹಾರ್ಮೋನಿಯಂ-8
9. ತಬಲ-8
10. ಡೋಲಕ್-5
11. ಶ್ರುತಿ-2
12. ಮಾಕೋಸ್-7
13. ಕಂಜಿರ-6
14. ಗೆಜ್ಜೆ-300

1. ಡೋಲಕ್-3
2. ಹಾರ್ಮೋನಿಯಂ-3
3. ಗಿಟಾರ್-1
4. ಶ್ರುತಿ-1
5. ಕಂಜಿರ-5
6. ತಾಳ-5
7. ಮಾಕೋಸ್-7
8. ತಬಲ-2

ಬೆಂಗಳೂರು ಗ್ರಾಮಾಂತರ

1. ತಮಟೆ-25
2. ತಾಸು-5

1. ತಮಟೆ-2
2. ತಾಸು-3

3. ರಂದೋಲು-4
4. ನಗಾ-5
5. ಹರೆ-4
6. ನಾಗಸ್ವರ-5
7. ಡೋಲು-5
8. ಹಾರ್ಮೋನಿಯಂ-4
9. ತಬಲ-2
10. ಡೋಲಕ್-2
11. ಶ್ರುತಿಪೆಟ್ಟಿಗೆ-3
12. ಮಾಕೋಸ್-10
13. ಕಂಜಿರ-9
14. ಗೆಜ್ಜೆ-350
15. ತಾಳ-11 ಜೊತೆ
16. ಕ್ಲಾರಿನೆಟ್-4
17. ಸೌದ್ರಲ-1
18. ಟಂಪ್ರೀಸ್-1

ಹಾಸನ

1. ಹಾರ್ಮೋನಿಯಂ-7
2. ತಬಲ-7
3. ಶ್ರುತಿಪೆಟ್ಟಿಗೆ-6
4. ಕಂಜರಿ-9
5. ತಾಳ-9
6. ಜಾಲರ-6
7. ಟಾಪ್ ಡೋಲು ಡ್ರಮ್-6
8. ಸೈಡ್ ಡ್ರಮ್-6
9. ಕ್ಲಾರಿಯೋನೆಟ್-15
10. ಗಿಲ್ಕಿ-4
11. ಬೇಸ್ ಡ್ರಮ್-2
12. ಟ್ರಂಪೆಟ್-3

1. ಹಾರ್ಮೋನಿಯಂ-3
2. ತಬಲ-3
3. ತಾಳ-3
4. ಶ್ರುತಿಪೆಟ್ಟಿಗೆ-2
5. ಕಂಜಿರ-3
6. ಗೆಜ್ಜೆ-3
7. ಕೊಳಲು-3
8. ಡೋಲಕ್-1

13. ಕಹಳೆ-2
14. ಸ್ಯಾಕ್ಸೋಫೋನ್-1

ಧಾರವಾಡ

1. ಜಾನಪದ ಪರಿಕರ-3 ಸೆಟ್
2. ಲಂಬಾಣಿ ಭಜನಾ ಪದ ಪರಿಕರ-2ಸೆಟ್
3. ತತ್ವಪದಗಳ ಪರಿಕರ-3 ಸೆಟ್
4. ಬ್ಯಾಂಡ್‌ಸೆಟ್-4
5. ಕರಡಿ ವಾದನ ಸೆಟ್-1
6. ಕಿನ್ನರಪದಗಳ ಸೆಟ್-1
7. ಶಾಸ್ತ್ರೀಯ ಸಂಗೀತ-1 ಸೆಟ್
8. ಜಾನಪದ ಹಾಡುಗಳ ಸೆಟ್-1

1. ದೊಡ್ಡಾಟ ಪರಿಕರಗಳು-1 ಸೆಟ್

ಮಂಗಳೂರು

1. ಡೋಲು-5
2. ಸೈಡ್‌ಡ್ರಮ್-5
3. ಟ್ರಂಪೆಟ್-5
4. ಕ್ಲಾರ್‌ಸೆಟ್-5
5. ಹಾರ್ಮೋನಿಯಂ -7
6. ತಬಲ-7
7. ತಾಳ-5
8. ಶ್ರುತಿಪೆಟ್ಟಿಗೆ-3
9. ಓಲಗದ ಡೋಲು-2
10. ಚಂಡೆ-1

ಮೈಸೂರು

1. ಹಾರ್ಮೋನಿಯಂ -6
2. ಕಂಜಿರ -6
3. ತಾಳ-4
4. ಕ್ಲಾರಿಯೋನೆಟ್-8
5. ಟ್ರಂಪೆಟ್-5
6. ರಮ್ಮು ತತ್ತು ತಂಬುರ್ಜಿ-6 ಸೆಟ್
7. ಗಿಲಕಿ-6

8. ಕ್ಲಾರಿಯೋನೆಟ್ ರಿಂಗ್ಸ್-30
9. ಬಾರಿ ನಾಗಸ್ವರ-7
10. ಶ್ರುತಿಪೆಟ್ಟಿಗೆ-4
11. ರಮ್ಮಡಿ-2
12. ಕಂಸಾಳೆ -12 ಜೊತೆ
13. ಗೆಜ್ಜೆ-9
14. ಡೋಳು - 3 ಸೆಟ್
15. ಎಲೆ-5 ನಂಬರ್
16. ಗೊಂಡೆ-1
17. ಲೇವಲ ಡೋಲ್-2
18. ಡೋಲಕ್-1
19. ಕಡ್ಡಿಗಳು-1 ಜೊತೆ
20. ಬೇಸ್‌ಡ್ರಮ್-24
21. ವಿಕನಾದ ತಂಬೂರಿ-1
22. ಟ್ಯಾಮಲಿನ್ ಪೈಬರ್-1
23. ಗಿಲ್ಕಿ-1
24. ನೂಲು-ಅರ್ಧ ಕೆ.ಜಿ.
25. ಲೀಮಾ ಡಾಗು-4 ಸೇರು

ಬಳ್ಳಾರಿ

1. ಭಜನೆ-11
2. ಮೃದಂಗ-1
3. ತೊಗಲುಗೊಂಬೆ-1
4. ಲಂಬಾಣಿ ನೃತ್ಯ-2
5. ಕ್ಲಾರಿಯೋನೆಟ್-1
6. ಬಯಲಾಟ-1
7. ವಯೋಲಿನ್-1
8. ವೇಷಗಾರ-3
9. ಬ್ಯಾಂಡ್-3
10. ಕಹಳೆ-1

11. ಸುಡಗಾಡುಸಿದ್ಧ ಪರಿಕರ
12. ಹಲಾಬಿ ಹೆಜ್ಜೆಮೇಳ-1
13. ಶಹಾನಾಯ್-1
14. ಮುಖವೀಣೆ-1
15. ಜಡೆಕೋಲಾಟ-1
16. ಕೋಲಾಟ-1

ಬೀದರ್

1. ಹಾರ್ಮೋನಿಯಂ-2
2. ತಲಬ-10
3. ಮೃದಂಗ-2
4. ಡೋಲಕ್-2
5. ಕಂಜರಿ-6
6. ದಿಮದಿ-6
7. ಬ್ರಾಸ್-10
8. ವೀಣೆ-2
9. ದೊಳ್ಳು-1
10. ಬ್ರಾಸ್‌ಬಾಡಿ-1
11. ತಾಸ-2
12. ತಾಳ-2
13. ತಂಬ್ರೋಸ್ ಪೇರು-60
14. ತಂಬೂರಿ ಬ್ರಾಸ್‌ಪೇರು-1
15. ತರಿ-1
16. ಕಂಚಿನತಾಳ-2
17. ತಾಂಗೀಲ್-2
18 ಗೊಣಸು-10
19. ಶಂಖ-1

ಕೋಲಾರ

1. ಹಾರ್ಮೋನಿಯಂ-15
2. ತಬಲ-14

3. ಪಿಟೀಲು-7
4. ಕಂಜರಿ-8
5. ತಾಳ-8
6. ಗೆಜ್ಜೆಗಳು-28 ಜೊತೆ
7. ಕೊಳಲು-4
8. ಶ್ರುತಿಪೆಟ್ಟಿಗೆ-2
9. ಗಿಲ್ಕಿ-2
10. ತಮಟೆ-8
11. ಡೋಲಕ್-3
12. ಜಾನರ-1
13. ತಾಂಜ-1
14. ಡೊಳ್ಳು-2
15. ಬೇಸ್ ಡ್ರಮ್-2
16. ಡ್ರಂ ಸೇಕೋ-2

ತುಮಕೂರು ಜಿಲ್ಲೆ

1. ಬ್ಯಾಂಡ್‌ಸೆಟ್-10
2. ತಮಟೆ-3
3. ದೋಣಿ-1
4. ಡೋಲು-1
5. ನಾಗಸ್ವರ-1
6. ಶ್ರುತಿಬಾಕ್ಸ್-1
7. ತಾಳ-1 ಜೊತೆ
8. ಆರೆ-1
9. ಹಾರ್ಮೋನಿಯಂ-2
10. ನಾದಸ್ವರ
11. ಡೊಳ್ಳುಗಳು

ಶ್ರೀಮತಿ ಬಿ.ಟಿ. ಲಲಿತಾನಾಯಕ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಉತ್ತರದಲ್ಲಿ ಎಲ್ಲವನ್ನೂ ಒದಗಿಸಿದ್ದಾರೆ. ಆದರೆ ಉಡುಪುಗಳನ್ನು ಕೊಡುವುದನ್ನು ನಿಲ್ಲಿಸಿದ್ದಾರೆ ಎಂದು ನಾನು ಕೇಳಿದ್ದೇನೆ. ಕೆಲವು ಜಾನಪದ ಕಲೆಗಳಿಗೆ ವಾದ್ಯ ಪರಿಕರಗಳು ಬೇಕಾಗುವುದಿಲ್ಲ. ಉಡುಪುಗಳೇ ಬಹಳ ಪ್ರಮುಖವಾಗಿರುತ್ತವೆ. ಉದಾಹರಣೆಗೆ,

ಲಂಬಾಣಿ ನೃತ್ಯ. ಇದಕ್ಕೆ ಯಾವ ಪರಿಕರಗಳು ಬೇಕಾಗಿಲ್ಲ, ಉಡುಪುಗಳೇ ಆ ಕಲೆಗೆ ಬೇಕಾಗುತ್ತದೆ. ಅದೇ ರೀತಿ ಬುಡುಗ ಜಂಗಮರು ಎಂದು ಹಗಲು ವೇಷಗಾರರು ಇದ್ದಾರೆ. ಅವರೂ ಕೂಡ ನಾನಾ ರೀತಿಯ ವೇಷಗಳನ್ನು ಹಾಕುವುದರಿಂದ ಅಂಥ ವೇಷಗಳೇ ಅವರಿಗೆ ಮುಖ್ಯವಾಗುತ್ತದೆ. ಅವರಿಗೆ ಹೆಚ್ಚು ಪರಿಕರಗಳು ಬೇಕಾಗುವುದಿಲ್ಲ, ಆದ್ದರಿಂದ ಉಡುಪುಗಳು ಕೊಡುವುದನ್ನು ನಿಲ್ಲಿಸಿದ್ದೀರಾ? ನಿಲ್ಲಿಸಿದ್ದರೆ, ದಯವಿಟ್ಟು ಅದನ್ನು ಕೊಡುತ್ತೀರಾ? ಇದಕ್ಕೆ ನನಗೆ ಉತ್ತರ ಬೇಕು.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಮಾನ್ಯ ಅಧ್ಯಕ್ಷರೇ, ನಾವು ಈ ಒಂದು ಜನಾಂಗಕ್ಕೆ ವಾದ್ಯ ಪರಿಕರಗಳನ್ನು ಕೊಡತಕ್ಕಂಥ ವ್ಯವಸ್ಥೆ ಇದೆ. ಉಡುಪುಗಳು ಬೇಕು ಎಂದು ಇಲ್ಲಿಯವರೆಗೂ ನಮ್ಮನ್ನು ಯಾರೂ ಕೇಳಿದ್ದುದು ಕಂಡುಬಂದಿಲ್ಲ. ಅದರ ಬದಲಿಗೆ ಉಡುಪುಗಳನ್ನು ಕೊಡಬೇಕು ಎನ್ನುವ ಬೇಡಿಕೆ ಅವರಿಂದ ಬಂದಾಗ ಅದನ್ನು ನಾವು ಪರಿಶೀಲನೆ ಮಾಡುತ್ತೇವೆ.

ಶ್ರೀಮತಿ ಬಿ.ಟಿ. ಲಲಿತಾನಾಯಕ್ : ಇದುವರೆಗೂ ಕೊಡುತ್ತಿದ್ದರು. ಒಂದು ವೇಳೆ ಅದನ್ನು ನಿಲ್ಲಿಸಿದ್ದರೆ ಅದು ಮುಂದುವರಿಯಬೇಕು, ಹಗಲು ವೇಷಗಾರರಿಗೆ ಕೊಡುವ ಉಡುಪು ಒಂದು ರೀತಿ ದಟ್ಟಿ ತರಹ ಇರುತ್ತದೆ. ಅದಕ್ಕೆ ಏನೋ ಹೆಸರು ಹೇಳುತ್ತಾರೆ. ಬುಡುಬುಡಿಕೆ ಆಡಿಸಿಕೊಂಡು ಬರುತ್ತಾರೆ ನೋಡಿ, ಅದಕ್ಕೆಲ್ಲಾ ಬರೀ ಬಟ್ಟೆಯೇ ಮುಖ್ಯವಾಗುತ್ತದೆ. ಆದ್ದರಿಂದ ದಯವಿಟ್ಟು ಉಡುಪುಗಳನ್ನು ಕೊಡಬೇಕು ಎಂದು ಹೇಳುತ್ತೇನೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಅಂಥ ಕಲಿಗಾರರು ಬಂದು ಕೇಳಿದಾಗ ಖಂಡಿತಾ ಅದನ್ನು ಅವರಿಗೆ ಒದಗಿಸುತ್ತೇವೆ.

ಅಧ್ಯಕ್ಷರು : ಕೊಡುತ್ತಾರಲ್ಲ, ಆಯಿತು ಬಿಡಿ.

ಶ್ರೀ ಕುಂಬ್ಳೆ ಸುಂದರರಾವ್ : ಸನ್ಮಾನ್ಯ ಅಧ್ಯಕ್ಷರೇ, ಕಲೆಗಾರರಿಗೆ ಉಡುಪಿಗೆ ಸಹಾಯ ಮಾಡುತ್ತೇವೆ ಎಂದು ಹೇಳಿದ್ದು ಬಹಳ ಒಳ್ಳೆಯ ಮಾತು. ಆದರೆ ಕಾರ್ಯತ: ನನ್ನ ಅನುಭವದಲ್ಲಿ ಅದು ಇಲ್ಲ, ಬಿ.ಟಿ. ಲಲಿತಾನಾಯಕ್‌ರವರು ಸಂಸ್ಕೃತಿ ಸಚಿವೆಯಾಗಿದ್ದಾಗ ದುರ್ಬಲವಾದಂಥ ಒಂದು ವೇಷಭೂಷಣಗಳನ್ನು ಉಪಯೋಗಿಸಿಕೊಂಡು ಜೀವನ ಮಾಡುವಂಥ ಸಂಸ್ಥೆಯ ಒಂದು ಅರ್ಜಿಯನ್ನು ತೆಗೆದುಕೊಂಡು ಹೋಗಿದ್ದೆ. ಅವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕಳುಹಿಸಿದರು. ಅಲ್ಲಿಂದ ಅದು ಈಗಿನ ನಿರ್ದೇಶಕರು ಯಾರಿದ್ದಾರೆ. ಅವರ ಟೇಬಲ್ ಮೇಲೆ ಬಂತು. ಅರ್ಹ ವ್ಯಕ್ತಿಯನ್ನು ಅವರ ಇಲಾಖೆಗೆ ನಾನು ಕರೆದುಕೊಂಡು ಹೋದಾಗ ಒಂದು ಒಳ್ಳೆಯ ಮಾತು, ಒಂದು ಮಾರ್ಗದರ್ಶನ ಯಾವುದನ್ನೂ ಆ ಇಲಾಖೆ ಕೊಡಲಿಲ್ಲ, ಸಂಬಂಧಪಟ್ಟಂಥ ಅಧಿಕಾರಿ ಕೊಡಲಿಲ್ಲ. ಅವರಿಗೆ ಅದರಿಂದ ಒಂದು ಜೀವನೋಪಾಯವಾಗುತ್ತದೆ. ಯಕ್ಷಗಾನಕ್ಕೆ ವೇಷಭೂಷಣಗಳು ಹೇಗೆ ಇರುತ್ತದೆ ಎನ್ನುವುದನ್ನು ತಾವು ಆ ದಿವಸ ನೋಡಿದ್ದೀರಿ. ಅಂಥ ವೇಷ ಭೂಷಣಗಳನ್ನು ಬೇಗನೆ ಹಚ್ಚುವುದಕ್ಕೂ ಗತಿ ಇಲ್ಲದೇ ಅವರು ಉಪವಾಸ ಬೀಳುವ ಸ್ಥಿತಿ ಇದೆ ಎಂದರೆ ಅವರ ಹೃದಯ ಕರಗಲಿಲ್ಲ. ಆದ್ದರಿಂದ ಈಗಿನ ಮಂತ್ರಿಗಳ ಆಶ್ವಾಸನೆ ಎಷ್ಟು ನಂಬಿಕೆಗೆ ಯೋಗ್ಯ ಎನ್ನುವುದೇ ನನ್ನ ಪ್ರಶ್ನೆ.

ಶ್ರೀಮತಿ ಬಿ.ಟಿ. ಲಲಿತಾನಾಯಕ್ : ಮಾನ್ಯ ಅಧ್ಯಕ್ಷರೇ, ಯಾರೆಂದರೆ ಅವರಿಗೆ ಕೊಡುವುದಲ್ಲ ಇದು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಇದು

ಕೊಡುವಂಥಾದ್ದು ಇರುವುದರಿಂದ ಬಹುಶಃ ಬೇರೆಯವರು ಬಂದಾಗ ಅವರು ಸರಿಯಾಗಿ ಹೇಳಿರಲಿಕ್ಕಿಲ್ಲ. ಆದರೆ ಇಲ್ಲಿ ಒಂದನ್ನು ದಯವಿಟ್ಟು ತಿಳಿದುಕೊಳ್ಳಬೇಕು. ಪರಿಶಿಷ್ಟ ಜಾತಿ ಮತ್ತು ವರ್ಗದವರ ಬಗ್ಗೆ ನಾನು ಕೇಳಿದ್ದುದು. ಅದು ಒಂದು ಕಾನೂನು ಇದೆ, ಅದರ ಪ್ರಕಾರ ನಾನು ಕೇಳಿದ್ದುದು.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಸನ್ಮಾನ್ಯ ಅಧ್ಯಕ್ಷರೇ, ನನ್ನ ದೃಷ್ಟಿಯಲ್ಲಿ ಕಲೆಗಾರರಿಗೆ ಹೆಚ್ಚಿಗೆ ನಾವು ಜಾತಿ ಬಣ್ಣ ಕಟ್ಟುವುದಿಲ್ಲ. ಕಲೆಗಾರರೆಂದರೆ ಎಲ್ಲರೂ ಕಲೆಗಾರರು. ಯಾರು ಕಲೆಗಾರರಿದ್ದರೆ, ಅವರಿಗೆ ಮುಖ್ಯವಾಗಿ ಕೊಡತಕ್ಕಂಥ ಸೌಲಭ್ಯವನ್ನು ನನ್ನ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಕೊಡತಕ್ಕಂಥಾದ್ದು ಆದ್ಯ ಕರ್ತವ್ಯ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ವಿಶೇಷ ಘಟಕ ಯೋಜನೆಯಲ್ಲಿ ನಾವು ಹಣವನ್ನು ಇಟ್ಟಿದ್ದೇವೆ. ಅದರ ಪ್ರಕಾರ ಕೊಡುತ್ತೇವೆ. ಆದರೆ ಕಲೆಗಾರರನ್ನು ಗುರುತಿಸುವಾಗ ಅಪರ ಜಾತಿ ನೋಡಬಾರದು, ನಾನು ಅದನ್ನು ನೋಡುವುದಿಲ್ಲ.

ಅಧ್ಯಕ್ಷರು : ಇವರ ಮಾತನ್ನು ನಂಬಬಹುದು.

ಶ್ರೀ ಕುಂಬ್ಳೆ ಸುಂದರರಾವ್ : ಕಲಾವಿದರು ಎಂದು ಯಾರಿದ್ದಾರೆ, ಅವರ ಈಗಿನ ಸ್ಥಿತಿ ನೋಡಿದರೆ, ರಾಜ್ಯದಲ್ಲಿ ಅವರು ಪರಿಶಿಷ್ಟರಿಗಿಂತ ಕಡೆಯಾಗಿದ್ದಾರೆ ಎಂದು ನನಗನ್ನಿಸುತ್ತದೆ.

ಶ್ರೀಮತಿ ಬಿ.ಟಿ. ಲಲಿತಾನಾಯಕ್ : ಮಾನ್ಯ ಅಧ್ಯಕ್ಷರೆ, ಪರಿಶಿಷ್ಟರು ಎಂದು ಏಕೆ ಮಾಡಿದ್ದಾರೆ ಎಂದರೆ ಅವರಿಗೆ ಕೊಂಡು ಕೊಳ್ಳುವುದಕ್ಕೂ ಕೂಡ ಆಗುವುದಿಲ್ಲ. ಎಷ್ಟೋ ಸಲ, ಭರತನಾಟ್ಯ, ಅದೂ ಇದೂ ಮಾಡುವ ತರಹ ಆಗಿದೆ.

ಅಧ್ಯಕ್ಷರು : ನಿಮ್ಮದೂ ಅರ್ಥವಾಯಿತು, ಅವರದ್ದೂ ಅರ್ಥವಾಯಿತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ನನಗೆ ಇದು ಅರ್ಥವಾಗುವುದಿಲ್ಲ. ಪ್ರತಿಯೊಂದು ಮಾತಿಗೆ ನೀವು ಯಾವಾಗಲೂ ಪರಿಶಿಷ್ಟರಿಗಿಂತಲೂ ಕಡಿಮೆಯಾಗಿದ್ದಾರೆ ಎಂದರೆ, ನಿಮ್ಮ ಮನಸ್ಸಿನಲ್ಲಿ ಇನ್ನೂ ಇದೆ, ಅವರನ್ನು ಮೇಲೆ ತರಬೇಕು, ಎನ್ನುವುದಕ್ಕಿಂತಲೂ ಅದರ ಜೊತೆ ಕಂಪೇರ್ ಮಾಡಿಕೊಂಡು, ಎಲ್ಲಾ ಫೆಸಿಲಿಟೀಸ್ ಅನ್ನು ತೆಗೆದುಕೊಳ್ಳಬೇಕು ಎನ್ನತಕ್ಕಂಥಾದ್ದು ನಿಮ್ಮ ತಲೆಗೆ ಬರುತ್ತಿದೆ. ಇದನ್ನು ಮೊದಲು ಬಿಡಿ. ಇವತ್ತು ಇದ್ದ ಹಾಗೇ ಹೇಳಿಬಿಡಿ. ಕಲಾವಿದರು ಎಂದರೆ ಎಲ್ಲರೂ ಕಲಾವಿದರೇ. ಅದಕ್ಕೆ ಜಾತಿಯನ್ನು ಏಕೆ ಅಟ್ಯಾಚ್ ಮಾಡುತ್ತೀರಿ. ನಿಮಗಿಂತಲೂ ಕಡಿಮೆ ಅವನಿಗಿಂತಲೂ ಕಡಿಮೆ ಎಂದರೆ ಷೆಡ್ಯೂಲ್ಡ್ ಕ್ಯಾಸ್ಟ್ ಕಲಾವಿದ ಅವನು ಬೇರೆಯೇ?

ಅಧ್ಯಕ್ಷರು : ಅದೆಲ್ಲಾ ಏನೂ ಇಲ್ಲ, ಕಲಾವಿದರೆಲ್ಲಾ ಕಲಾವಿದರೇ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕಲಾವಿದರುಗಳೆಲ್ಲಾ ಕಲಾವಿದರುಗಳೇ. ಅವರಿಗೆ ನೀವು ಏನು ಕೊಡಬೇಕೋ ಅದನ್ನು ಕೊಡಿ.

ಅಧ್ಯಕ್ಷರು : ಸ್ವೋರ್ಟ್ಸ್‌ಮೆನ್‌ಗಳು, ಕಲಾವಿದರುಗಳಿಗೆಲ್ಲಾ ಜಾತಿ ಏನೂ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಪದೇ ಪದೇ ಅದನ್ನು ಹೇಳಿ ಈಗ ಏನಾಗಿದೆ ಎಂದರೆ ಸಮಾಜದಲ್ಲಿ ನಿಮ್ಮ ತಲೆಯಿಂದ ಅದು ಇನ್ನೂ ಹೋಗುತ್ತಿಲ್ಲ.

ಅಧ್ಯಕ್ಷರು : ವಾಟಾಳರೇ ನೀವು ಕಲಾವಿದರೇ ಹೇಳಿ. ಕಲಾವಿದರು ಏನೋ ಹೇಳುತ್ತಿದ್ದಾರೆ.

ಶ್ರೀ ಎಂ.ಸಿ. ನಾಣಯ್ಯ : ಕಲಾವಿದರಿಗೆ ಮಾಶಾಸನ ಕೊಡುತ್ತಿದ್ದರು.

ಶ್ರೀಮತಿ ಬಿ.ಟಿ. ಲಲಿತಾ ನಾಯಕ್ : ಗ್ರಾಮಾಂತರ ಪ್ರದೇಶದಲ್ಲಿ ಒಬ್ಬ ಪ್ರತಿಭಾವಂತ ಇರುತ್ತಾನೆ. ಅವನು ಏನೋ ಒಂದು ವಾದ್ಯವನ್ನು ನುಡಿಸುತ್ತಾನೆ. ಅವನಿಗೆ ಅದನ್ನು ತೆಗೆದುಕೊಳ್ಳುವುದಕ್ಕೆ ಶಕ್ತಿ ಇರುವುದಿಲ್ಲ. ಅಂಥವನಿಗೆ ಅನುಕೂಲ ಮಾಡಬೇಕು ಎಂದು ನಾನು ಕೇಳಿದ್ದು. ತೀರಾ ಕೈಲಾಗದವರಿಗೆ ವಾದ್ಯ ಪರಿಕರ ಕೊಡಲಾಗುವುದು ಎಂದು ಮಾಡಿ

ಅಧ್ಯಕ್ಷರು : ಈಗ ಆಯಿತಲ್ಲ, ಅವರಿಗೆ ಕೊಡಿಸೋಣ. ಅವರಿಗೂ ಮಾಡೋಣ, ಬೇರೆಯವರಿಗೂ ಮಾಡಿಸೋಣ.

ಶ್ರೀಮತಿ ಬಿ.ಟಿ. ಲಲಿತಾನಾಯಕ್ : ಬೇರೆಯವರಿಗೆ ಬೇರೆ ರೀತಿಯಿಂದ ಸಿಗುತ್ತದೆ. ಅದರಲ್ಲಿ ಯಾವ ಸಂಶಯವೂ ಇಲ್ಲ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಸನ್ಮಾನ್ಯ ಅಧ್ಯಕ್ಷರೇ, ಇಲ್ಲಿ ತಪ್ಪು ತಿಳುವಳಿಕೆ ಆಗಬಾರದು. ಸನ್ಮಾನ್ಯ ಹಿರಿಯ ಸದಸ್ಯರಾದಂಥ ಖರ್ಗೆಯವರು ಕೇಳಿದ್ದಕ್ಕೆ ಹೇಳುತ್ತೇನೆ. ಕಲೆಗಾರರು ಎನ್ನುವ ದೃಷ್ಟಿಯಲ್ಲಿ ಸರ್ವೇಸಾಮಾನ್ಯವಾಗಿ ಕಲೆಗಾರರು ಬಂದಾಗ ನಾವು ಅವರಿಗೆ ಯಾವ ಜಾತಿಯ ಬಣ್ಣವನ್ನೂ ಹಚ್ಚುವುದಿಲ್ಲ. ಅವರನ್ನು ಗುರುತಿಸಿಬಿಟ್ಟು ಅವರಿಗೋಸ್ಕರ ಕೊಡ ಮಾಡತಕ್ಕಂಥಾದ್ದು ನಮ್ಮ ಕರ್ತವ್ಯ. ಅದರಲ್ಲಿ ಶೇ. 15ರಷ್ಟನ್ನು ಬಜೆಟ್ಟಿನಲ್ಲಿ ವಿಶೇಷ ಘಟಕ ಯೋಜನೆಯಲ್ಲಿ ಬರತಕ್ಕಂಥ ವಿಶೇಷವಾದ ಹಣ ಇಟ್ಟಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಆ ಹಣದಲ್ಲಿ ಕೊಡತಕ್ಕಂಥಾದ್ದು ಇದೆ.

ಅಧ್ಯಕ್ಷರು : ಅವರು ಹೇಳಿದ್ದೇ ಬೇರೆ. ನನಗೆ ಬರುವ ದೊಡ್ಡ ಕಷ್ಟ ಏನೆಂದರೆ ನಿಮಗೆ ಯಾರಿಗೂ ಭಾಷೆಯೇ ಅರ್ಥವಾಗುವುದಿಲ್ಲ. ಅವರು ಒಂದು ನೀತಿಯ ಮಾತನ್ನು ಹೇಳಿದರು. ಏಕೆ ಸದಾಕಾಲ ಈ ಸದನದಲ್ಲಿ ಪ್ರಸ್ತಾಪ ಮಾಡುವಾಗ ಅವರನ್ನು ಹೋಲಿಕೆ ಮಾಡಿಕೊಂಡು, ಅವರನ್ನು ಆಧಾರವಾಗಿ ಇಟ್ಟುಕೊಂಡು ಮಾತನಾಡುತ್ತೀರಿ ಎಂದು ನಿಮಗೆ ಹೇಳಲೇ ಇಲ್ಲ ಅವರು. It is a good suggestion that Mr. Kharge has made. You should also bear this in mind.

ಶ್ರೀ ಎ. ರುಕ್ಮಯ್ಯ ಪೂಜಾರಿ : ಮಾನ್ಯ ಅಧ್ಯಕ್ಷರೇ, ಕಲೆಗಾರರು ಆರ್ಥಿಕವಾಗಿ ಬಹಳ ಹಿಂದುಳಿದಿದ್ದಾರೆ. ಈಗ ಅವರನ್ನು ಕಂಪೇರ್ ಮಾಡಿದರು ಎಂದರೆ ಆರ್ಥಿಕವಾಗಿ ತುಂಬಾ ಹಿಂದುಳಿದಿದ್ದಾರೆ.

ಅಧ್ಯಕ್ಷರು : ಹೌದೌದು, ಯಾರು ಹಿಂದುಳಿದವರು ಎಂದು ಸುಂದರರಾಯರನ್ನು ನೋಡಿದರೆ ಗೊತ್ತಾಗುವುದಿಲ್ಲವೇ? ಅವರಿಗೆ ಇರುವ ಸೌಕರ್ಯ ನಿಮಗೂ, ನಮಗೂ ಇಲ್ಲ. ಅವನ್ನೆಲ್ಲಾ ಆಮೇಲೆ ನಾನು ನಿಮಗೆ ಹೇಳುತ್ತೇನೆ.

ಮಾನ್ಯ ಸದಸ್ಯರು : ಅಧ್ಯಕ್ಷರೇ ಒಂದು ಮಾತು. ಈ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಸ್ವಲ್ಪ ಕಲಾವಿದರ ಬಗ್ಗೆ ಅನುಕಂಪವುಳ್ಳವರು, ಕಲಾ ಪ್ರಜ್ಞೆಯುಳ್ಳವರು ಅಧಿಕಾರಕ್ಕೆ ಬಂದರೆ ಹೆಚ್ಚಿನ ಪ್ರಯೋಜನವಾದೀತು ಎಂದು ನನಗನ್ನಿಸುತ್ತದೆ. ಈ ಮಾತನ್ನು ಏಕೆ ಹೇಳುತ್ತಿದ್ದೇನೆ ಎಂದರೆ, ನನಗೆ ಭಾಷಣದ ಅವಕಾಶ ಸಿಕ್ಕಿದರೆ ಖಂಡಿತಾ ನಾನು ಈ ಬಗ್ಗೆ ವಿವರಿಸುವವನಿದ್ದೇನೆ. ಈಗ ನಿಮ್ಮ

ಸಮಯ ತೆಗೆದುಕೊಳ್ಳುವುದಿಲ್ಲ. ಅಧಿಕಾರಿಗಳಿಂದ ಕಲಾವಿದರಿಗೆ ಏನು ಪ್ರಯೋಜನವಾಗಬೇಕೋ ಅದು ಆಗುತ್ತಿಲ್ಲ ಎನ್ನುವುದು ನನ್ನ ನಿಸ್ಸಂಶಯವಾದ ಅಭಿಪ್ರಾಯ.

ಶ್ರೀ ವಾಟಾಳ್ ನಾಗರಾಜ್ : ಬುಡುಬುಡುಕೆ ಎಂಬುದು ಇತ್ತೀಚಿನ ದಿನಗಳಲ್ಲಿ ಅದು ಒಂದು ಜಾತಿಯ ಸಂಕೇತವಾಗಿಲ್ಲ. ನಮ್ಮ ರಾಜಕಾರಣಿಗಳಲ್ಲಿ ಬಹಳಷ್ಟು ಜನರು ಇತ್ತೀಚೆಗೆ ಬುಡುಬುಡುಕೆಯನ್ನು ಬಿಡುವುದನ್ನು ಕಲಿತಿದ್ದಾರೆ. ಆದ್ದರಿಂದ ಅವರೆಲ್ಲರಿಗೂ ಈ ಬುಡುಬುಡಿಕೆಯನ್ನು ಒದಗಿಸುತ್ತೀರೋ?

ಶ್ರೀ ಲೀಲಾದೇವಿ ಆರ್. ಪ್ರಸಾದ್ : ಮಾನ್ಯ ವಾಟಾಳ್ ನಾಗರಾಜ್‌ರವರು ಬುಡುಬುಡುಕೆಯವರು ಹೇಳುವ ಜಾತಕವನ್ನು ಕೇಳಿರಬಹುದೆಂದು ಕಾಣಿಸುತ್ತದೆ. ಈ ಸದನದಲ್ಲಿ ಬುಡುಬುಡುಕೆಯವರು ಯಾರೂ ಇಲ್ಲವೆಂದು ನನಗನಿಸುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಈಗ ಬುಡುಬುಡುಕೆಯನ್ನು ಬಿಡುವುದೇ ಒಂದು ರಾಜಕಾರಣ ಆಗಿದೆ. ಅವರಿಗೂ ನೀವು ನಿಜವಾಗಿ ಒದಗಿಸುತ್ತೀರೋ?

ಶ್ರೀಮತಿ ಲೀಲಾದೇವಿ ಆರ್ ಪ್ರಸಾದ್ : ನಿಜವಾದ ಬುಡುಬುಡುಕೆಯವರು ಈ ರಾಜಕಾರಣಕ್ಕೆ ಬರುವುದೇ ಇಲ್ಲ. ಅವರ ಕಸುಬೇ ಬೇರೆ. ಅವರು ಬೇರೆ ಕಡೆಯಲ್ಲೇ ಇರುತ್ತಾರೆ.

ಶ್ರೀ ಎಸ್. ಕೃಷ್ಣಪ್ಪ : ಹಿಂದೆ ಕಲಾವಿದರಿಗೆ ಮಾಸಾಶನವನ್ನು ಕೊಡುವಂಥ ಒಂದು ಪರಿಪಾಠ ಇತ್ತು ಈಗ 1987 ರಿಂದ ಅದನ್ನು ನಿಲ್ಲಿಸಿದ್ದಾರೆ. ಅದನ್ನು ಏತಕ್ಕೆ ನಿಲ್ಲಿಸಿದರೆಂದು ಗೊತ್ತಿಲ್ಲ. ದಯವಿಟ್ಟು ಅದನ್ನು ಮತ್ತೆ ಮುಂದುವರೆಸಬೇಕು. ಇದರಿಂದ ಹಿಂದೆ ಬಹಳ ಜನ ಕಲಾವಿದರಿಗೆ ಅನುಕೂಲವಾಗಿದೆ. ಈಗಿನ ಕಲಾವಿದರಿಗೆ ಇದು ದೊರೆಯುತ್ತಿಲ್ಲ. ಅದನ್ನು ಮತ್ತೆ ಮುಂದುವರೆಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ನಾವು ಮಾಸಾಶನವನ್ನು ಕಲಾವಿದರಿಗೆ ನಿಲ್ಲಿಸಿಯೇ ಇಲ್ಲ. ಮಾನ್ಯ ಸದಸ್ಯರು ತಪ್ಪು ಅಭಿಪ್ರಾಯವನ್ನು ಕೊಡಬಾರದು. ಈಗಾಗೇಲ ಕಲಾವಿದರಿಗೆ ಗೌರವ ಧನ ಎಂದು ಕೊಡುವುದಕ್ಕೆ ಬದಲಾಗಿ ಮಾಸಾಶನ ಎಂದು ಮೊದಲು 150 ರೂಪಾಯಿ ಏನು ಕೊಡುತ್ತಿದ್ದೆವು ಅದನ್ನು ಈಗ 250 ರೂಪಾಯಿಗೆ ಏರಿಸಿ ಕೊಡುತ್ತಿದ್ದೇವೆ. ಇನ್ನು ಮುಂದೆ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಕೊಡಬೇಕೆಂದು ತೀರ್ಮಾನ ತೆಗೆದುಕೊಳ್ಳಬೇಕೆಂದಿದ್ದೇವೆ.

ಚಿಕ್ಕ ಬಳ್ಳಾಪುರಕ್ಕೆ ಕೋರ್ಟ್ ಕಾಂಪ್ಲೆಕ್ಸ್‌ನ ಮಂಜೂರಾತಿ.

2572 - ಶ್ರೀ ಎಂ. ಶಿವಾನಂದ (ಚಿಕ್ಕ ಬಳ್ಳಾಪುರ) : ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆಯ ಚಿಕ್ಕಬಳ್ಳಾಪುರದಲ್ಲಿ ಕೋರ್ಟು ಕಾಂಪ್ಲೆಕ್ಸ್ ಮಂಜೂರು ಆಗಿರುವುದು ನಿಜವೇ.

ಆ) ಹಾಗಿದ್ದಲ್ಲಿ, ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಎಂ.ಸಿ. ನಾಣಯ್ಯ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ವಾರ್ತಾ ಮತ್ತು ಪ್ರಚಾರ ಸಚಿವರು) :

ಅ) ಇಲ್ಲ.